ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರತಕ್ಕ ೨೩೧ ಮುನ್ಸೀಫ್ ಕೋರ್ಟ್‌ಗಳ ಪೈಕಿ ೪೮ ಕೋರ್ಟ್‌ಗಳಿಗೆ ಸ್ವಂತ ಬಿಲ್ಡಿಂಗ್‌ಗಳಿಲ್ಲವೆಂದು ಹೇಳಿದ್ದಾರೆ. ಆದರಲ್ಲಿ ಬೆಂಗಳೂರು ಜಿಲ್ಲೆ ಒಂದರಲ್ಲೇ ೭ ಕಟ್ಟಡಗಳಿಲ್ಲ. ಮಂತ್ರಿಗಳ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆ, ಬೀದರ್ ಜಿಲ್ಲೆ, ರಾಯಚೂರು ಜಿಲ್ಲೆ ಹೀಗೆ ಎಲ್ಲಾ ಕಡೆ ಮುನ್ಸೀಫ್ ಕೋರ್ಟ್‌ಗಳಿಗೆ ಸರ್ಕಾರಿ ಕಟ್ಟಡ ಗಳಿವೆ. ಆದರೆ ನಮ್ಮ ಜಿಲ್ಲೆಯಲ್ಲಿ ಇಲ್ಲ. ಮಾನ್ಯ ಮಂತ್ರಿಗಳನ್ನು ಈ ಪ್ರಶ್ನೆಯನ್ನು ಮೂಲ ಭೂತವಾಗಿ ಕೇಳಿದ ಉದ್ದೇಶ ಏನೆಂದರೆ ನನ್ನ ಕ್ಷೇತ್ರದಲ್ಲಿ ಕೋರ್ಟ್ ನಡೆಯುವುದಕ್ಕೆ ಬಹಳ ಕೊಂದರೆ ಇದೆ. ಕನಕಪುರದಲ್ಲಿರತಕ್ಕ ಅಡ್ವೋಕೇಟ್ಸ್ ಅಸೋಸಿಯೇಷನ್‌ನವರು ಸ್ಟ್ರೈಕ್ ಕೂಡ ಮಾಡಿ ಸರ್ಕಾರಕ್ಕೂ ಮನವಿ ಅರ್ಪಿಸಿದ್ದಾರೆ. ನನಗೆ ತಿಳಿದಿರುವಹಾಗೆ ಮಾನ್ಯ ಕಂದಾಯ ಸಚಿವರು ಮತ್ತು ಮಾನ್ಯ ಮೊಯಲಿಯವರು ಕನಕಪುರಕ್ಕೆ ಬಂದು ಆ ಸಮಸ್ಯೆ ಬಗೆಹರಿಸುತ್ತೇವೆಂದು ಒಪ್ಪಿಕೊಂಡಿದ್ದಾರಂತೆ. ಆದರ ಬಗ್ಗೆ ನನಗೆ ತಿಳಿಸಬೇಕು. ಅಲ್ಲಿ ಕಟ್ಟಡ ಕಟ್ಟುವ ಬಗ್ಗೆ ತಮಗೆ ಹೈಕೋರ್ಟಿನಿಂದ ಪತ್ರ ಕೂಡ ಬಂದಿದೆ. ಆದ್ದರಿಂದ ಈ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ತಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೆ, ಈಗ ಸನ್ಮಾನ್ಯ ಶಾಸಕರಾದ ಸಿಂಧ್ಯಾ ಅವರು ಹೇಳಿದ ಪ್ರಕಾರ ಕನಕಪುರದಲ್ಲಿ ಕಟ್ಟಡದ ತೀವ್ರ ಕೊರತೆ ಇದೆ. ಅಲ್ಲಿ ಅಡ್ವೋಕೇಟ್ಸ್ ಕೂಡ ಸ್ಟ್ರೈಕ್ ಮಾಡಿದ್ದಾರೆ. ನ್ಯಾಯವಾದ ಬೇಡಿಕೆ ಅವರದಿದೆ. ಹೈಕೋರ್ಟ್‌ನಿಂದ ಕೂಡ ಈ ಬಗ್ಗೆ ಪತ್ರವ್ಯವಹಾರ ನಡೆದಿದೆ. ಈ ಬಗ್ಗೆ ನಾನು ಕೂಡ ಕಂದಾಯ ಸಚಿವರ ಜೊತೆಯಲ್ಲಿ ಮಾತನಾಡಿದ್ದೇನೆ. ಜೊತೆಯಲ್ಲಿ ಹೋಗಿ ನೋಡಿ ಪರಿಹಾರ ಮಾಡೋಣ ಎಂದು ಅವರು ಹೇಳಿದ್ದಾರೆ. ಅಲ್ಲಿನ ಕಂದಾಯ ಇಲಾಖೆ ಹೊಸ ಮಿನಿ ವಿಧಾನಸೌಧಕ್ಕೆ ವರ್ಗಾವಣೆಯಾಗಿದೆ. ಈಗ ಅಲ್ಲಿ ಒಂದು ಹಳೇ ಕಟ್ಟಡ ಇದೇ ಅದರಲ್ಲಿ ಕೋರ್ಟ್ ಮಾಡುವುದಾದರೆ ಬಹುಶಃ ಅದನ್ನು ಆಲೋಚನೆ ಮಾಡಬಹುದು. ಅದ್ದ ಆಷ್ಟು ಸಾಧ್ಯ ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈ ಬಗ್ಗೆ ನಾವಿಬ್ಬರೂ ಕೂಡ ಸೇರಿ ಆದಷ್ಟು ಜಾಗ್ರತೆ ಈ ಸಮಸ್ಯೆ ಪರಿಹಾರ ಮಾಡತಕ್ಕ ಎಲ್ಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಬೈಲಹೊಂಗಲದಲ್ಲಿರುವ ವೀರರಾಣಿ ಕಿತ್ತೂರ ಚೆನ್ನಮ್ಮನ ಸಮಾಧಿಗೆ ಹೊನಲು ಬೆಳಕು ಏರ್ಪಡಿಸುವ ಕುರಿತು

೪೮೧. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

೧) ಬೈಲಹೊಂಗಲದಲ್ಲಿರುವ ವೀರರಾಣಿ ಕಿತ್ತೂರು ಚೆನ್ನಮ್ಮನ ಸಮಾಧಿಗೆ ಹೊನಲು ಬೆಳಕು ಏರ್ಪಡಿಸುವ ಬಗ್ಗೆ ದಿನಾಂಕ ೨೪-೩-೮೯ರಂದು ಆಜ್ಞೆ ಹೊರಡಿಸಲಾಗಿದೆಯೆ ?

೨) ಹಾಗಿದ್ದಲ್ಲಿ ಈ ಕೆಲಸಕ್ಕೆ ಇದುವರೆಗೆ ಎಷ್ಟು ಹಣ ಖರ್ಚಾಗಿರುವುದು ಮತ್ತು ಕೆಲಸವು ಯಾವ ಹಂತದಲ್ಲಿದೆ ?

೩) ಈ ಕೆಲಸ ಪೂರ್ಣಗೊಳ್ಳಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

೧) ಹೌದು.

೨) ಈವರೆವಿಗೂ ಕೆಲಸವನ್ನು ಪ್ರಾರಂಭಿಸಿಲ್ಲ.

೩) ಪ್ರಶ್ನೆ ೨ಕ್ಕೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಹೇಮಪ್ಪ ಕೌಜಲಗಿ.— ಸನ್ಮಾನ್ಯ ಅಧ್ಯಕ್ಷರೆ, ಬೈಲಹೊಂಗಲದಲ್ಲಿ ವೀರ ಕಿತ್ತೂರು ರಾಣಿ ಚೆನ್ನಮ್ಮನ ಸಮಾಧಿ ಅಭಿವೃದ್ಧಿಪಡಿಸುವ ಸಲುವಾಗಿ ಆಗಿನ ಮುಖ್ಯಮಂತ್ರಿಗಳಾದ ಮಾನ್ಯ ರಾಮಕೃಷ್ಣ ಹೆಗಡೆಯವರ ಒಂದು ಅಧ್ಯಕ್ಷತೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಹೊನಲು ಬೆಳಕು ಯೋಜನೆ ಹಾಗೂ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಮತ್ತು ತೋಟಗಾರಿಕೆ ಇಲಾಖೆಯಿಂದ ಒಳ್ಳೆಯ ಗಿಡಗಳನ್ನು ಹಚ್ಚುವಂಥ ಒಂದು ನಿರ್ಣಯ ತೆಗೆದುಕೊಳ್ಳಲಾಯಿತು. ಅದೇರೀತಿ

೧೯೯೦ರಲ್ಲಿ ಅಲ್ಲಿ ಹೊಸಲು ಬೆಳಿಕು ಯೋಜನೆಯನ್ನು ಪ್ರಾಸೋದ್ಯಮ ಇಲಾಖೆಯಿಂದ ತೆಗೆದು ಕೊಂಡರು. ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ಕೊಡಲಾಯಿತು ? ಎಷ್ಟು ಹಣಕ್ಕೆ ಕೊಡಲಾಯಿತು ? ಇದಕ್ಕೆ ತಾಂತ್ರಿಕ ಮಂಜೂರಾತಿಯನ್ನು ಯಾವಾಗ ಕೊಡಲಾಯಿತು? ಈ ಕೆಲಸ ಇಲ್ಲಿಯವರೆಗೆ ಏತಕ್ಕೆ ಪ್ರಾರಂಭವಾಗಿಲ್ಲ ? ಇದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೆ, ಈಗ ವೀರರಾಣಿ ಕಿತ್ತೂರು ಚೆನ್ನಮ್ಮ ಅವರ ಸಮಾಧಿಗೆ ಹೊಸಲು ಬೆಳಕಿನ ವ್ಯವಸ್ಥೆ ಮಾಡಬೇಕೆಂದು ಅದನ್ನು ಅಳವಡಿಸುವುದಕ್ಕೆ ಲೋಕೋಪಯೋಗಿ ಇಲಾಖೆ ೨,೯೯,೭೨೦ ರೂಪಾಯಿಗಳಿಗೆ ಅಂದಾಜು ತಯಾರ ಮಾಡಿದೆ. ಇದನ್ನು ಸರ್ಕಾರ ೨೪-೨-೯೯ರಲ್ಲಿ ಮಂಜೂರಾತಿ ಮಾಡಿದೆ. ಆದರೆ ೯೯-೯೦ನೇ ಸಾಲಿನಲ್ಲಿ ಹಣದ ಉಳಿತಾಯ ಇಲ್ಲವೇ ಇದ್ದುದರಿಂದ ೧೬-೧೧-೯೯ರಲ್ಲಿ ಪುನಃ ಈ ಆಜ್ಞೆಯನ್ನು ನವೀಕರಿಸಿದೆ. ಈ ಬಿಲ್‌ಗಳನ್ನು ತಯಾರಿಸಿ ೬-೩-೯೦ರಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಕಳುಹಿಸುವುದಕ್ಕೆ ನಮ್ಮ ನಿರ್ದೇಶಕರು ಹೇಳಿದ್ದಾರೆ. ಆದರೆ ಇಲಾಖೆ ಬಿಲ್‌ಗಳನ್ನು ತಾನೇ ತಯಾರಿಸಿ ಖಜಾನೆಯಿಂದ ಹಣ ತೆಗೆಯಲು ಪ್ರಯತ್ನ ನಡೆದರೂ ಅದು ಆಗಲಿಲ್ಲ. ಇದು ಆಗಬೇಕಾದ ಕೆಲಸ. ಬಹುಶಃ ಇಲಾಖೆಗಳ ಮಧ್ಯದಲ್ಲಿ ಸ್ವಲ್ಪ ಕಮ್ಯೂನಿಕೇಷನ್ ಗ್ಯಾಪ್ ನಿಂದಾಗಿ ಈ ಕೆಲಸ ಆಗಲಿಲ್ಲ. ಆದರೆ ೨೧-೪-೯೦ರಂದು ಪುನಃ ಇದನ್ನು ಆಗಬೇಕಾಗಿರುವ ಕೆಲಸ ವೆಂದು ನವೀಕರಿಸಿ ಲೋಕೋಪಯೋಗಿ ಇಲಾಖೆಗೆ ಈ ಕೆಲಸವನ್ನು ಕೂಡಲೇ ಪ್ರಾರಂಭ ಮಾಡ ಬೇಕೆಂದು ಈಗಾಗಲೇ ಆದೇಶವನ್ನು ನೀಡಿದ್ದೇವೆ. ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆದಷ್ಟು ಜಾಗ್ರತೆ ಈ ಕೆಲಸವನ್ನು ಸಂಪೂರ್ಣ ಮಾಡುತ್ತೇವೆ.

ಶ್ರೀ ಎಸ್. ಹೆಚ್. ಕೌಜಲಗಿ — ಇವತ್ತಿನ ದಿವಸ ಈ ಪ್ರವಾಸೋದ್ಯಮ ಇಲಾಖೆಯವರು ಲೋಕೋಪಯೋಗಿ ಇಲಾಖೆಯವರಿಗೆ ಬರೆಯುತ್ತಾರೆ. ಏನೆಂದರೆ ನೀವು ಬಿಲ್ ಕಳುಹಿಸಿಕೊಡಿ ರೊಕ್ಕ ಕೊಡುತ್ತೇವೆ ಎಂಬುದಾಗಿ ಬರೆಯುತ್ತಾರೆ. ಯಾವುದೇ ಇಲಾಖೆಯಾಗಲಿ ಕೆಲಸ ಮಾಡಿದ ನಂತರ ಬಿಲ್ಲನ್ನು ಕೊಡಬೇಕಾಗುತ್ತದೆ. ಕೆಲಸ ಮಾಡದಿದ್ದರೆ ಅವರಿಗೆ ಹಣವನ್ನು ಕೊಡುವುದಾದರೂ ಹೇಗೆ ? ಆಡಳಿತಾತ್ಮಕ ಅಪ್ರೂವಲ್ ಕೊಟ್ಟ ತಕ್ಷಣವೇ ನಮಗೆ ಎನ್.ಓ.ಸಿ. ಕೊಟ್ಟುಬಿಡಿ, ನಾವು ಮಾಡುತ್ತೇವೆ ಅಂತ ಹೇಳುತ್ತಾರೆ. ಅಲ್ಲಿ ಕೆಲಸವನ್ನೇ ತೆಗೆದುಕೊಂಡಿಲ್ಲ. ಆದರೂ ಬಿಲ್ಲನ್ನು ಕಳುಹಿಸಿಕೊಡಿ ಅಂತ ಹೇಳಿದರೆ ಇದು ಯಾವ ಕಾಲಕ್ಕೆ ಆಗಬೆ ಕು ? ಈ ಒಂದು ಕೆಲಸದ ಸಲುವಾಗಿ ನಾನು ಮಾನ್ಯ ಮಂತ್ರಿಗಳನ್ನು ೩ ಸಲ ಭೇಟಿಯಾಗಿದ್ದೇನೆ, ತಾವು ಸಹಾನುಭೂತಿಯಿಂದ ಪರಿಶೀಲಿಸಿ ನನ್ನ ಅಪ್ಲಿಕೇಷನ್ ಮೇಲೆ ಬರೆದಂಕೊಟ್ಟಿರಿ. ಮಂತ್ರಿಮಂತ್ರಿಗಳನ್ನು ಎರಡು ಸಲ ಭೇಟಿಯಾಗಿದ್ದು ಅವರ ಬರೆದಿದ್ದಾರೆ. ಕಾರ್ಯದರ್ಶಿಯವರನ್ನು ೩ ಸಲ ಭೆ ಟಿಯಾಗ್ತೇನೆ. ಅಧಿಕೃತಕ ಒಬ್ಬ ಅಧಿಕಾರಿಯು ತಪ್ಪಿನಿಂದಾಗಿ ಈ ಕೆಲಸ ಆಗದೆ ನಿಂತಿದೆ. ಆದ್ದರಿಂದ ಯಾವುದೇ ಪರಿಸ್ಥಿತಿ ಇರಲಿ, ಆದಷ್ಟು ಬೇಗ ಈ ಕೆಲಸ ಆಗುವಂತೆ ನೋಡಿಕೊಳ್ಳಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.— ಅದನ್ನು ಮಾಡುತ್ತೇವೆಂದೇ ಹೇಳಿದ್ದಾರೆ.

ಶ್ರೀ ಎಸ್. ಹೆಚ್. ಕೌಜಲಗಿ.— ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು.— ಎಷ್ಟೇ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದರೂ ಕೂಡ...

ಶ್ರೀ ಎಸ್. ಹೆಚ್. ಕೌಜಲಗಿ.— ಬರೆಯುಕೊಟ್ಟರೂ ಏಕೆ ಆಗಲಿಲ್ಲ ?

ಅಧ್ಯಕ್ಷರು.— ಇದರ ಬಗ್ಗೆ ಈಗಾಗಲೇ ಮಂತ್ರಿಗಳು ಹೇಳಿದ್ದಾರೆ. ಅದನ್ನು ಮಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಸದಸ್ಯರ ಕಳಕಳಿ ಸರಿ. ಈ ಸರ್ಕಾರದ ಬೇರೆ ಬೇರೆ ಇಲಾಖೆಯಲ್ಲಿ ಕೆಲವೊಂದು ಸಲ ಇದೇ ಪರಿಸ್ಥಿತಿಯಲ್ಲಿ ಆಗುತ್ತದೆ. ಇದಕ್ಕಾಗಿ ವ್ಯಸನಪಡಬೇಕಾಗಿದೆ. ಏಕೆಂದರೆ ಮಂಜೂರಾತಿಯನ್ನು ಮಾಡಿದಮೇಲೆ ಅದನ್ನು ಅನುಷ್ಠಾನಕ್ಕೆ ಕೊಡಬೇಕಾದುದು ಆಯಾ ಇಲಾಖೆಯ ಕರ್ತವ್ಯ. ಮುಂದೆ ಈ ಲೋಪ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಈ ಕೆಲಸವನ್ನು ಮಾಡಬೇಕಾಗಿದೆ. ಅದನ್ನು ಮಾಡಿಸುತ್ತೇನೆ.

ಹಿರೇಕೆರೂರಿನಲ್ಲಿರುವ ಕ.ರಾ.ರ.ಸಾ. ಸಂಸ್ಥೆಯ ಘಟಕ.

೧೮೬. ಶ್ರೀ ಬಿ. ಎಚ್. ಬನ್ನೀಕೋಡ್(ವಿ.ಸ.ಸ.).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ರಸ್ತೆ ಸಾರಿಗೆಯ ಹುಬ್ಬಳ್ಳಿ ವಿಭಾಗದಲ್ಲಿ ಹಿರೇಕರೂರು ಘಟಕವು ಹೆಚ್ಚು ಲಾಭ ದಾಯಕವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?